ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು).—

ಅ) ರಾಜ್ಯದಲ್ಲಿ ೩೦-೯-೧೯೯೦ರ ವರೆಗೆ ಒಟ್ಟು ೧೭೪೩೪ ಅಂಗನವಾಡಿಗಳನ್ನು ಮಂಜೂರು ಮಾಡಲಾಗಿದೆ (ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ)

ಮಂಡಳಿಯವರ ಹಾಗೂ ಮಕ್ಕಳ ಕಲ್ಯಾಣ ಇಲಾಖೆಯು ಬಾಲವಾಡಿಗಳನ್ನು ನಡೆಸುತ್ತಿಲ್ಲ.

ಕ್ರಮ ಸಂಖ್ಯೆ	ಜಿಲ್ಲೆ		ಮಂಜೂರಾಗಿರುವ ಅಂಗನವಾಡಿಗಳ ಸಂಖ್ಯೆ
೧)	ಬೆಳಗಾಂ	...	೨೩೨೫
೨)	ಬಳ್ಳಾರಿ	...	೭೬೯
೩)	ಬೀದರ್	...	೮೪೮
೪)	ಬಿಜಾಪುರ	...	೧೦೪೭
೫)	ಚಿತ್ರದುರ್ಗ	...	೧೩೦೯
೬)	ಧಾರವಾಡ	...	೧೩೮೭
೭)	ಗುಲ್ಬರ್ಗಾ	...	೧೫೧೮
೮)	ಹಾಸನ	...	೨೯೬
೯)	ರಾಯಚೂರು	...	೨೯೨
೧೦)	ಶಿವಮೊಗ್ಗ	...	೮೮೭
೧೧)	ಬೆಂಗಳೂರು (ರೂರಲ್)	...	೪೦೦
೧೨)	ಬೆಂಗಳೂರು (ಅರ್ಬನ್)	...	೭೨೩
೧೩)	ಕೊಡಗು	...	೫೫೯
೧೪)	ಚಿಕ್ಕಮಗಳೂರು	...	೪೨೬
೧೫)	ದಕ್ಷಿಣ ಕನ್ನಡ	...	೧೨೪೭
೧೬)	ಕೋಲಾರ	...	೧೨೯೬
೧೭)	ಮಂಡ್ಯ	...	೫೮೬
೧೮)	ಮೈಸೂರು	...	೧೧೮೭
೧೯)	ತುಮಕೂರು	...	೧೦೫೨
೨೦)	ಉತ್ತರ ಕನ್ನಡ	...	೪೮೪
		ಒಟ್ಟು	೧೭೪೩೪

ಆ) ೧೭೦೧ ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿವೆ.
ಇ) ಹೌದು.

ಚಿನ್ನಪ್ಪರೆಡ್ಡಿ ಹಾಗೂ ಮಂಡಲ್ ಆಯೋಗದ ವರದಿಯ ಅನುಷ್ಠಾನದ ಬಗ್ಗೆ

೧೨೪. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಾಮಾಜಿಕ ಬಡತನ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿರುವ ಜನರಿಗಾಗಿ ಚಿನ್ನಪ್ಪರೆಡ್ಡಿ ಹಾಗೂ ಮಂಡಲ್ ಆಯೋಗದ ವರದಿಗಳನ್ನು ಅನುಷ್ಠಾನಕ್ಕೆ ತರಲು ಸರ್ಕಾರಕ್ಕಿರುವ ತೊಂದರೆ ಏನೇನು ?

ಆ) ಆರ್ಥಿಕ ಮಟ್ಟದ ಆಧಾರದ ಮೇಲೆ ಮೀಸಲಾತಿ ನೀಡುವುದು ಸರ್ಕಾರದ ವಿಚಾರದಲ್ಲಿ ದೆಯೇ ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು).—

ಅ) ಮಂಡಲ್ ಆಯೋಗದ ಅನುಷ್ಠಾನದ ಪ್ರಕರಣವು ಪ್ರಸ್ತುತ ಭಾರತದ ಸರ್ವೋಚ್ಚ ನ್ಯಾಯಾಲಯದ ಪರಿಶೀಲನೆಯಲ್ಲಿರುತ್ತದೆ.